**ಡಾ ಅರುಂಧತಿ ಚಂದ್ರಶೇಖರ್** ಭಾ.ಆ.ಸೇ.
ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

DO NO: NHM /CPHC-UHC/Fit Health Worker/29/2020-21 ದಿನಾಂಕ: 29/09/2020

ಆತ್ಮೀಯ

**ವಿಷಯ:** ಅಕ್ಟೋಬರ್ 2, 2020 ರಿಂದ ಪ್ರಾರಂಭವಾಗುವ 3 ವಾರಗಳ ಅವಧಿಯಲ್ಲಿ **"ಫಿಟ್ ಹೆಲ್ತ್ ವರ್ಕರ್ ಅಭಿಯಾನ"** ವನ್ನು ಆರೋಗ್ಯ ಇಲಾಖೆಯ ಎಲ್ಲಾ ಸಿಬ್ಬಂದಿಗಳು, ಪೌರ ಕಾರ್ಮಿಕರು, ನೈರ್ಮಲ್ಯದ ಕರ್ತವ್ಯ ನಿರತ ಸಿಬ್ಬಂದಿಗಳು ಹಾಗೂ ಸರ್ಕಾರಿ ನೌಕರರಿಗೆ ನಡೆಸುವ ಕುರಿತು.

**ಉಲ್ಲೇಖ:** **ಹೆಚ್ಚುವರಿ ಕಾರ್ಯದರ್ಶಿಗಳು ಹಾಗೂ ಅಭಿಯಾನ ನಿರ್ದೇಶಕರು, GOI, NHM ಪತ್ರ ಸಂಖ್ಯೆ 7 (33)/2018-NHM-1 ದಿನಾಂಕ: 23-09-2020.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅಕ್ಟೋಬರ್ 2 ರಿಂದ ಅಕ್ಟೋಬರ್ 23, 2020 ರವರೆಗೆ 3 ವಾರಗಳ ಅವಧಿಯಲ್ಲಿ ವಿಶ್ವ ಹೃದಯ ದಿನದ ಅಂಗವಾಗಿ ಎಲ್ಲಾ ರಾಜ್ಯಗಳಲ್ಲಿ **"ಫಿಟ್ ಹೆಲ್ತ್ ವರ್ಕರ್ ಅಭಿಯಾನ"** ವನ್ನು ನಡೆಸಲು ಭಾರತ ಸರ್ಕಾರವು ಉಲ್ಲೇಖ –1 ರಲ್ಲಿ ಪ್ರಸ್ತಾಪಿಸಿದೆ. ಅದರಂತೆ ಈ ಅವಧಿಯಲ್ಲಿ ಆದ್ಯತೆ ಮೇರೆಗೆ ಆರೋಗ್ಯ ಇಲಾಖೆಯ ಎಲ್ಲಾ ಸಿಬ್ಬಂದಿಗಳಿಗೆ (ಆಶಾ, ಆರೋಗ್ಯ ಸಹಾಯಕರು (ಕಿರಿಯ/ಹಿರಿಯ), ಎಂ.ಎಲ್.ಹೆಚ್.ಪಿ ಗಳು, ಶುಶ್ರೂಷಕರು, ಪ್ರಯೋಗಾಲಯ ತಂತ್ರಜ್ಞರು, ವೈದ್ಯಾಧಿಕಾರಿಗಳು, ತಜ್ಞ ವೈದ್ಯರು, ತಾಲ್ಲೂಕು ವೈದ್ಯಾಧಿಕಾರಿಗಳು, ಕಾರ್ಯಕ್ರಮಾಧಿಕಾರಿಗಳು, ಗ್ರೂಪ್–ಡಿ ಸಿಬ್ಬಂದಿಗಳು, ಕಛೇರಿ ಸಿಬ್ಬಂದಿಗಳು ಮತ್ತು ಎಲ್ಲಾ ಗುತ್ತಿಗೆ ಹಾಗೂ ಹೊರಗುತ್ತಿಗೆ ಸಿಬ್ಬಂದಿಗಳು) ಸಾಮಾನ್ಯ ಅಸಂಕ್ರಾಮಿಕ ರೋಗಗಳಾದ ಅಧಿಕ ರಕ್ತದೊತ್ತಡ, ಸಕ್ಕರೆ ಖಾಯಿಲೆ ಮತ್ತು ಮೂರು ಇತರೆ ಕ್ಯಾನ್ಸರ್‌ಗಳ (ಬಾಯಿ, ಸ್ಥನ, ಗರ್ಭಕೋಶ ಕ್ಯಾನ್ಸರ್) ಬಗ್ಗೆ ಆರೋಗ್ಯ ತಾಪಾಸಣೆಯನ್ನು ನಡೆಸಲು ಕ್ರಮ ಕೈಗೊಳ್ಳುವುದು. ಮುಂದುವರೆದು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಜೊತೆಗೆ ಕ್ರಿಯಾಯೋಜನೆ ಕುರಿತು ಚರ್ಚಿಸಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಅಂಗನವಾಡಿ ಕಾರ್ಯಕರ್ತರು, ಪೌರ ಕಾರ್ಮಿಕರು, ನೈರ್ಮಲ್ಯ ಕರ್ತವ್ಯ ನಿರತ ಸಿಬ್ಬಂದಿಗಳು ಹಾಗೂ ಇತರೆ ಸರ್ಕಾರಿ ನೌಕರರಿಗೂ ಸಹ ಆರೋಗ್ಯ ತಾಪಾಸಣೆಯನ್ನು ನಡೆಸಬಹುದಾಗಿದೆ. ತಾತ್ಕಾಲಿಕ ವೇಳಾಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ತತ್ಸಂಬಂಧ ಬದಲಾಗುತ್ತಿರುವ ಕೋವಿಡ್–19 ಪರಿಸ್ಥಿತಿಗೆ ಅನುಗುಣವಾಗಿ ತಾವು ಈ ಅಭಿಯಾನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಅಕ್ಟೋಬರ್ 23, 2020ರ ಒಳಗಾಗಿ ಹಂತ ಹಂತವಾಗಿ ಪೂರೈಸಲು ಮತ್ತು ತಮ್ಮ ಜಿಲ್ಲೆಗಳಲ್ಲಿರುವ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ಒಳಗೊಂಡಂತೆ ವಿವಿಧ ಆರೋಗ್ಯ ಸಂಸ್ಥೆಗಳ ಹಂತಗಳಲ್ಲಿ ಅನುಷ್ಠಾನಗೊಳಿಸಲು ಯೋಜನೆಯನ್ನು ರೂಪಿಸಿ ಕಾರ್ಯಗತಗೊಳಿಸಬೇಕಾಗಿರುತ್ತದೆ. ಪ್ರತಿನಿತ್ಯ ಸಂಜೆ 5.00 ಗಂಟೆಯೊಳಗೆ ಆ ದಿನದಂದು ನಡೆದ ಚಟುವಟಿಕೆಗಳ ಮಾಹಿತಿಯನ್ನು ಛಾಯಾಚಿತ್ರಗಳೊಂದಿಗೆ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದ ಪ್ರಕಾರ AB-HWC Portal ನಲ್ಲಿ ದಾಖಲಿಸಬೇಕಾಗಿರುತ್ತದೆ.

ಈ ಅಭಿಯಾನದ ಕೊನೆಯಲ್ಲಿ ಉಪ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಲಭ್ಯವಿರುವ ಮುಕ್ತನಿಧಿಯನ್ನು ಉಪಯೋಗಿಸಿಕೊಂಡು, ಫಿಟ್ ಹೆಲ್ತ್ ವರ್ಕರ್ ಪ್ರಶಸ್ತಿ/ಪುರಸ್ಕಾರಗಳನ್ನು ಸಹ ನೀಡಬಹುದಾಗಿರುತ್ತದೆ.

ಅಂತಿಮವಾಗಿ ಅಭಿಯಾನದಲ್ಲಿ ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿಯನ್ನು ಸಿದ್ದಪಡಿಸಿ, AB-HWC Portal ನಲ್ಲಿ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದ ಪ್ರಕಾರ ಕ್ರೂಢೀಕೃತ ಮಾಹಿತಿಯನ್ನು ಸೂಕ್ತ ಛಾಯಾಚಿತ್ರಗಳೊಂದಿಗೆ ದಿನಾಂಕ:24/10/2020 ರೊಳಗೆ ನಮೂದಿಸಲು ಕೋರಿದೆ.

ಶುಭಾಶಯಗಳೊಂದಿಗೆ,

ತಮ್ಮ ವಿಶ್ವಾಸಿ,

ಅರುಂಧತಿ

**(ಡಾ ಅರುಂಧತಿ ಚಂದ್ರಶೇಖರ್)**

**ಗೆ,**
**ಎಲ್ಲಾ ಜಿಲ್ಲೆಯ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.**

**ಮೊದಲನೆ ಮಹಡಿ, ರಾಷ್ಟ್ರೀಯ ಆರೋಗ್ಯ ಅಭಿಯಾನ ಕಟ್ಟಡ, ಆನಂದರಾವ್ ವೃತ್ತ, ಬೆಂಗಳೂರು–560 009.**
**ದೂರವಾಣಿ ಸಂಖ್ಯೆ: 080–22373587,ಇ–ಮೇಲ್: md-nhm@karnataka.gov.in**